# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **459** |
| ಸದಸ್ಯರ ಹೆಸರು | : | ಶ್ರೀ ಡಿ.ಎಸ್.ಅರುಣ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19.08.2026 |
| ಉತ್ತರಿಸುವ ಸಚಿವರು | : | ಇಂಧನ ಮತ್ತು ಪ್ರವಾಸೋದ್ಯಮ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಪೈಕಿ ಒಂದಾದ 'ಗೃಹಜ್ಯೋತಿ' ಯೋಜನೆಯಡಿ ಪ್ರತಿ ಮನೆಗೆ ನೀಡಲಾಗುತ್ತಿರುವ 200 ಯೂನಿಟ್‌ವರೆಗಿನ ಉಚಿತ ವಿದ್ಯುತ್ ಸೌಲಭ್ಯವನ್ನು ಆದಾಯ ತೆರಿಗೆ ಪಾವತಿದಾರರು ಮತ್ತು ಜಿಎಸ್‌ಟಿ (GST) ಸಂಖ್ಯೆ ಹೊಂದಿರುವವರಿಗೆ ಕಡಿತಗೊಳಿಸಲು ಸರ್ಕಾರ ಚಿಂತನೆ ನಡೆಸಿರುವುದು ನಿಜವೇ; ಹೌದಾದಲ್ಲಿ, ಈ ಕುರಿತು ಸರ್ಕಾರದ ನಿಲುವೇನು; | ಗೃಹ ಜ್ಯೋತಿ ಯೋಜನೆಯನ್ನು ಪರಿಷ್ಕರಣೆಗೊಳಿಸಲಾಗಿರುವುದಿಲ್ಲ. |
| ಆ) | ಉಚಿತ ವಿದ್ಯುತ್ ಸೌಲಭ್ಯದಿಂದ ಆದಾಯ ತೆರಿಗೆ ಮತ್ತು ಜಿಎಸ್‌ಟಿ ಪಾವತಿಸುವ ಸುಮಾರು 2 ಲಕ್ಷ ಗ್ರಾಹಕರ ಪಟ್ಟಿಯನ್ನು ಈಗಾಗಲೇ ಸಿದ್ಧಪಡಿಸಲಾಗಿದೆಯೇ; ಈ ನಿಯಮ ಜಾರಿಗೆ ಬಂದರೆ ರಾಜ್ಯದ ಮಧ್ಯಮ ವರ್ಗದ ಪ್ರಾಮಾಣಿಕ ತೆರಿಗೆ ಪಾವತಿದಾರರಿಗೆ ಅನ್ಯಾಯವಾಗುವುದಿಲ್ಲವೇ; | ಮುಂದುವರೆದು, ಸರ್ಕಾರದ ದಿನಾಂಕ: 30.06.2026 ರ ಆದೇಶರನ್ವಯ ಗೃಹ ಜ್ಯೋತಿ ಯೋಜನೆಗೆ ಪ್ರಸ್ತುತ ನೊಂದಣಿಗೊಳಿಸಿರುವ ಸ್ಥಾವರಗಳ ಮಾಹಿತಿಯನ್ನು ಪರಿಶೀಲಿಸಲು ಹಾಗೂ ಹೆಚ್ಚುವರಿ ಮಾಹಿತಿ (ಮಾಲೀಕ / ಬಾಡಿಗೆದಾರ, ಪಡಿತರ ಚೀಟಿ, ಕರ್ನಾಟಕದ ಮತದಾರರಾಗಿರುವ ಮಾಹಿತಿ, ಅರ್ಜಿದಾರರ ಭಾವ ಚಿತ್ರ, ಪ್ರವರ್ಗ, ಆದಾಯ ತೆರಿಗೆ ಪಾವತಿ ಮಾಹಿತಿ ಹಾಗೂ ವೃತ್ತಿಯ ಮಾಹಿತಿ) ಸಂಗ್ರಹಿಸಿ ಇಂಧೀಕರಿಸುವ / ದಾಖಲಿಸುವ ಕಾರ್ಯವನ್ನು ವಿದ್ಯುತ್‌ಸರಬರಾಜು ಕಂಪನಿಗಳು ದಿನಾಂಕ: 01.07.2026 ರಿಂದ ಕೈಗೆತ್ತಿಕೊಳ್ಳಲಾಗಿದ್ದು, ಸದರಿ ಕಾರ್ಯ ಪ್ರಗತಿಯಲ್ಲಿರುತ್ತದೆ. |
| ಇ) | ಗೃಹಜ್ಯೋತಿ ಯೋಜನೆಗೆ ಸಾರ್ವಜನಿಕರ ಆಧಾರ್, ಇ-ಕೆವೈಸಿ(e-KYC) ಹಾಗೂ ಮೊಬೈಲ್ ನಂಬರ್ ಮೂಲಕ ಮರುಪರಿಶೀಲನೆ ನಡೆಸಲು ಮುಂದಾಗಲು ಕಾರಣಗಳೇನು; ನಕಲಿ ಹೆಸರುಗಳು, ಒಂದೇ ಮನೆಯ ಹೆಸರಲ್ಲಿ ಹಲವು ಗೇಟ್‌ವೇ ಸಂಪರ್ಕ ಹೊಂದಿರುವವರು, ಬಾಡಿಗೆದಾರರು ಮತ್ತು ಸರ್ಕಾರಿ ನೌಕರರನ್ನು ಈ ಯೋಜನೆಯಿಂದ ಕೈಬಿಡುವ ಯೋಚನೆ ಸರ್ಕಾರದ ಮುಂದಿದೆಯೇ; | |
| ಈ) | ಈಗಾಗಲೇ 'ಗೃಹಲಕ್ಷ್ಮಿ' ಯೋಜನೆಯಡಿ ರಾಜ್ಯದಲ್ಲಿ 3,89,784 ಅನರ್ಹ ಫಲಾನುಭವಿಗಳನ್ನು ಪತ್ತೆ ಹಚ್ಚಿ, ಮಾಸಿಕ ₹77 ಕೋಟಿ ರೂ. ಉಳಿತಾಯ ಮಾಡಿರುವುದನ್ನು ಇಂಧನ ಇಲಾಖೆಯಲ್ಲೂ ಅಳವಡಿಸಿ, ಗೃಹಜ್ಯೋತಿ ಯೋಜನೆಗೆ ಹೊಸದಾಗಿ ಕಠಿಣ ಮಾನದಂಡಗಳನ್ನು ಹೇರಲು ಸರ್ಕಾರ ಮುಂದಾಗಿರುವುದರ ಹಿಂದಿನ ಆರ್ಥಿಕ ಅನಿವಾರ್ಯತೆಗಳೇನು? (ಸಂಪೂರ್ಣ ವಿವರ ನೀಡುವುದು); | |

ಸಂಖ್ಯೆ: ಎನರ್ಜಿ 217 ಇಬಿಎಸ್2026

(ಕೆ.ಜೆ.ಜಾರ್ಜ್)
ಇಂಧನ ಮತ್ತು ಪ್ರವಾಸೋದ್ಯಮ ಸಚಿವರು